Regd No M 1299 34 th Year ತಾ|| 1—8—51

SATYAVADI



ಸ್ಥಾಪಕರು- ಆರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಕಾಂಗ್ರೆಸಿನವರನ್ನು ತಿದ್ದಲು ಜನರು ಸಹಕರಿಸಬೇಕು !

ಮೊನ್ನೆ ಬೆಂಗಳೂರು ವಾಸವಿ ಧರ್ಮ ಶಾಲೆಯಲ್ಲಿ ಸೇರಿದ್ದ ಸಂತೋಷಕೂಟದಲ್ಲಿ ಶ್ರೀ ಕೆ. ಹನುಮಂತಯ್ಯನವರು ಭಾಷಣ ಮಾಡುತ್ತಾ ದೇಶದಲ್ಲಿ ಪ್ರತಿಯೊಬ್ಬರ ಸಹಕಾರ ಮತ್ತು ಸಹಾನುಭೂತಿಯಿಂದ ಕಾಂಗ್ರೆಸಿಗರು ತಪ್ಪಿತುಕೊಂಡು ನ್ಯಾಯಮಾರ್ಗದಲ್ಲಿ ನುಂದುನರಿಯಬೇಕೆಂದು ತಿಳಿಸಿದ್ದಾರೆ

ಅಮೇರಿಕೆಗೆ ಪ್ರಯಾಣ

ರಾಮನಗರ ಆರೋಗ್ಯಾಧಿಕಾರಿಯು ವರಾದ ಶ್ರೀ ಎಸ್. ಕೃಷ್ಣಸ್ವಾವಿರವರು ಅಮೇರಿಕಾಕ್ಕೆ ಎಂ ಪಿ. ಹೆಚ್. ವ್ಯಾಸಂಗ ಮಾಡಲು 18 ನೇ ತಾ|| ತೆರಳಿವರಾಗಿದ್ದಾರೆ.

ಉಸವಾಸ ಮುಕ್ತಾಯವಾಯಿತು

ಆರು ಮಂದಿ ಕುಷ್ಟ ರೋಗಿಗಳಿಗೆ ಚಿಕಿತ್ಸೆ ಮಾಡಿ ಅದು ಫಲಕಾರಿಯಾದರೆ ನಮ್ಮ ಚಿಕಿತ್ಸಾ ವಿಧಾನಕ್ಕೆ ಮಾನ್ಯತೆ ಕೊಡುವುದಾಗಿ ಸರ್ಕಾರ ತಿಳಿಸಿದ್ದರಿಂದ ಕಾನ್ಪುರದ ಎಲೆಕ್ಟ್ರೋ ಹೋಮಿಯೊಪತಿಕ್ ಪ್ರಿನ್ಸಿಪಾಲರಾದ ಶ್ರೀ ಎನ್. ಎಲ್. ಸಿಂಹ ತಮ್ಮ ಉಪವಾಸ ವ್ರತವನ್ನು ಮುಕ್ತಾಯ ಮಾಡಿದರೆಂದು ಲಕ್ನೋ ವಾರ್ತೆ ತಿಳಿಸಿತ್ತದೆ.

ಕರೆತರಲಾಯಿತು

ನಿನ್ನೆ ಶ್ರೀ ಎಲ್. ಪಿಸ್. ರಾಜುರವರನ್ನು ವಿಕ್ಟೋರಿಯಾ ಆಸ್ಪತ್ರೆಯಿಂದ ಸೆಂಟ್ರಲ್ ಜೈಲಿಗೆ ಸಾಗಿಸಲಾಯಿತೆಂದು ಬೆಂಗಳೂರು ವಾರ್ತೆ.

ಬಂದ್ ಆಯಿತು

ಅಬಡಾನಿನ ಎಂಜಿ ಕಾರ್ಖಾನೆ ಬಂದ್ ಆಯಿತೆಂದು ಟೆಹೆರಾನ್ ವಾರ್ತೆ.

ದಿವ್ಯವಾಣಿ

ಜಾಣರು ಗಡಿಯಾರವನ್ನಿಟ್ಟುಕೊಂಡಂತೆಯೇ ಜ್ಞಾನವನ್ನಿಟ್ಟುಕೊಳ್ಳುವರು. ಅದು ಮುಂದಿಯ ಮುಂದೆ ಪ್ರದರ್ಶಿಸಲಿಕ್ಕಲ್ಲ, ಸ್ವಂತ ಉಪಯೋಗಕ್ಕೆಂದು ಅವರು ಬಗೆಯುವರು.

— ಎ. ಮ್ಯಾಕ್ಡೆಂಜಿ.

ಸಂದರ್ಶನ

ಮೈಸೂರಿನ ಶಿಲ್ಪಿಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳು ತಾ|| 29 ರ ಸಂಜೆ ಹುಬ್ಬಳ್ಳಿಯಲ್ಲಿರುವ ಶ್ರೀ ಎಂ. ವಿ. ಏಣಗಿಯವರ ಕಲಾ ಮಂದಿರಕ್ಕೆ ಸಂದರ್ಶನವನ್ನಿತ್ತು ಅವರ ಕಲಾಕೃತಿಗಳನ್ನ ಕಂಡು ಮೆಚ್ಚಿಗೆ ವ್ಯಕ್ತಪಡಿಸಿದರು.

ಸರಳ ವ್ಯಕ್ತಿ

ಪರ್ಷಿಯಾ ಪ್ರಧಾನಿ ಮುಸಾದಿಕ್ ತೀರ ಸರಳರೆಂದು ದಿಲ್ಲಿಯಲ್ಲಿ ವಿದ್ಯಾ ಸಚಿವ ಆಜಾದ್ ತಿಳಿಸಿದ್ದಾರೆ.

ಮುಷ್ಕರ ಬೇಡ

ಅಸ್ಸಾಂ ರೈಲ್ವೆ ಕಾರ್ಮಿಕರು ಮುಷ್ಕರಕ್ಕೆ ಕೈಹಚ್ಚಬ್ಹಾರದೆಂದು ಅಲ್ಲಿಯ ಕಾರ್ಮಿಕ ಸಂಘದ ಅಧ್ಯಕ್ಷ ವತ್ತು ಕಾರ್ಯದರ್ಶಿಗಳು ಪ್ರಾರ್ಥನೆ ಮಾಡಿದ್ದಾರೆ.

ರಾಜಾಜ್ಞೆ

ಗ್ರೀಸಿನ ಪಾರ್ಲಿಮೆಂಟ್ ರದ್ದಾಗುವ ಆಜ್ಞೆಯನ್ನು ರಾಜನು ಹೊರಡಿಸಿ ಮಹಾ ಚುನಾವಣೆ ನಡೆಸಲು ತಿಳಿಸಿದ್ದಾರೆ

ಜನತಾ ಕಾಲೇಜು

ಮುಂದಿನ ಮಾಹೆ 15 ರಲ್ಲಿ ಅಮರಾವತಿಯಲ್ಲಿ ಜನತಾ ಕಾಲೇಜ್ ಆರಂಭವಾಗುವುದೆಂದು ನಾಗಪುರ ವಾರ್ತೆ.

ಬಟ್ಟೆ ಬೆಲೆ ಇನ್ನೂ ಕಡಿಮೆ ಆಗುತ್ತದೆ

ಇನ್ನು ಕೆಲವು ತಿಂಗಳುಗಳಲ್ಲಿ ಎಲ್ಲ ವಿಧದ ಬಟ್ಟೆಗಳ ಬೆಲೆ ಸಹಾ ಕಡಿಮೆ ಆಗುವುದೆಂದು ಬೊಂಬಾಯಿನಿಂದ ಗೊತ್ತಾಗಿದೆ ದೇಶಕ್ಕೆ ಬಟ್ಟೆ ಸರಬರಾಜು ಭಂಡಾಸೆ ಕೊಡಲು ಇನ್ನಾರು ತಿಂಗಳು ರಫ್ತು ಕೋಟಾವನ್ನು ಭಾರತ ಸರ್ಕಾರ ಹೆಚ್ಚಿಸುವದಿಲ್ಲವೆಂದು ಗೊತ್ತಾಗಿದೆ.

ಸೆಪ್ಟಂಬರಿನಿಂದ

ಬರುವ ಅಕ್ಟೋಬರ್ ತಿಂಗಳಿನಿಂದ ದಾವಣಗೇರಿ ಇಂಜಿನಿಯರಿಂಗ್ ಕಾಲೇಜಿ' ಪಾಠಪ್ರವಚನ ಪ್ರಾರಂಭ ಮಾಡಲು ಸರ್ಕಾರ ಆಜ್ಞೆ ಹೊಂಡಿಸಿರುವದಾಗಿ ಗೊತ್ತಾಗಿದೆ.

ಕಳವಳ ವ್ಯಕ್ತತೆ

ಚಂದ್ರನಾಗೂರು ಸಂಯುಕ್ತ ಪ್ರಗತಿ ಮುಖಂಡರು ಅಲ್ಲಿನ ಆಹಾರ ಪರಿಸ್ಥಿತಿ ತೀರಾ ಕಟ್ಟಿರುವ ಬಗೆಗೆ ಕಳವಳ ತೋರಿದ್ದಾರೆ.

ಜನವರಿಯಿಂದ ಆರಂಭ

ಮಹಾ ಚುನಾವಣೆ ಬಹುಶಃ ಮುಂದಿನ ವರ್ಷ ಜನವರಿ ತಾ|| 5 ರಿಂದ ಆರಂಭವಾಗಿ ವಿದ್ಯಾಸಿನಲ್ಲಿ ಮೂರು ವಾರಗಳು ನಡೆಯಬಹುದೆಂದು ಹಣಕಾಸಿನ ಸಚಿವ ಶ್ರೀ ಬಿ ಗೋಪಾಲರೆಡ್ಡಿ ತಿಳಿಸಿದ್ದಾರೆ.

ಅತ್ಯಂತ ಚಿಕ್ಕ ಮಗು

ಪ್ರಾಯಶಃ ಜಗತ್ತಿನ ಅತ್ಯಂತ ಚಿಕ್ಕ ಕೂಸು ಇಶ್ಕೀಜೆಗೆ ಸಂಯುಕ್ತ ಅಮೇರಿಕಾದ ಇಂಡಿಯಾನೋಪೋಲಿಸ್ ಆಸ್ಪತ್ರೆಯಲ್ಲಿ ಹುಟ್ಟಿತು : ಹುಟ್ಟುವ ಕಾಲಕ್ಕೆ ಅವಗುವಿನ ಭಾರ ೧ ಪೌಂಡು ೧೫ ಔನ್ಸು.

ಅದೆಷ್ಟು ಚಿನ್ನ

ಸಮುದ್ರದ ನೀರಿನಲ್ಲಿಯು ಎಲ್ಲ ಚಿನ್ನವನ್ನು ಮೇಲಕ್ಕೆತ್ತಿ ಜಗತ್ತಿನಲ್ಲಿರುವ ಜನರೊಳಗೆ ಸಮಾನವಾಗಿ ಹಂಚಿದರೆ ಸರಾಸರಿ ಒಬ್ಬೊಬ್ಬರ ಪಾಲಿಗೆ ೧೪ ಔಂಸ ಪವನುಗಳಷ್ಟು ಚಿನ್ನ ಬರುವದೆಂದು ಸಂಯುಕ್ತ ಅಮೇರಿಕಾದ ಓಶನೋಗ್ರಾಫರಾದ ಡಾ|| ರೋಜರ್ ರೆವಲ್ಲೆಯವರು ಲೆಕ್ಕ ಹಾಕಿದ್ದಾರೆ

ವಿಮಾನ ಬಿದ್ದಿದೆ

ವಿಮಾನವೊಂದು ಅಸ್ಸಾಂ ತೇಜಪುರ ಇದರ ಘಾನಕ್ಕೂ ಮೈಲಿ ದಾಯವ್ಯದಲ್ಲಿ ಬಿದ್ದಿರುವದಾಗಿ ಕಲ್ಕತ್ತೆ ವರದಿ ತಿಳಿಸುತ್ತದೆ. ಪತ್ತೆಹಚ್ಚಲು ೩ ಮಂದಿಯನ್ನು ಕಳಿಸಲಾಗಿದೆ

ಪಾಕ್‌ಗೆ ಬೆಂಬಲವಿಲ್ಲ

ಮಧ್ಯಪ್ರಾಚ್ಯದ ಮುಂದಿ ಕೋನು ದಾರು ಧ್ಯೇಯಗಳನ್ನು ಬೆಂಬಲಿಸುವದಿಲ್ಲ ಇಡೀ ಏಷಿಯದ ಜನ ಒಂದಿರಬೇಕೆಂದು ಅವರ ಇಚ್ಛೆ ಪಾಕಿಸ್ತಾನಕ್ಕೆ ಕಾಶ್ಮೀರದ ವಿಷಯದಲ್ಲಿ ಬೆಂಬಲವೇ ಇಲ್ಲ — ಎಂದು ವಿದ್ಯಾ ಸಚಿವ ಆಜಾದ್‌ರವರು ದೆಹಲಿಯಲ್ಲಿ ತಿಳಿಸಿದ್ದಾರೆ.

ಸಹಾಯ ಹಣ ಬೇಡಿಕೆ

ಮೈಸೂರು- ಸಂಸ್ಥಾನದಲ್ಲಿ ಈಗಿನ ದರದೂತೆಯೇ ಧಾನ್ಯ ಮಾಂಟ ನಾಡಲು ಸಹಾಯ ದ್ರವ್ಯ ಕೊಡಬೇಕೆಂದು ಮೈಸೂರು ಸರ್ಕಾರ ಭಾರತಕ್ಕೆ ಒತ್ತಾಯಹಾಕಿದೆ ಭಾರತ ಸರ್ಕಾರ ಅಕ್ಕಿ ಬೆಲೆ ಅಧಿಕಿಸಿರುವದೇ ಕಾರಣ.

ಕೊಚ್ಚಿ ಹೋದವು

ಅಂಬಾಲಾ ಸಿದ್ದಿ ಪ್ರಕಾರ ರಸೊಲವುರ ಮತ್ತು ಫೂಲ್ ಎಂಬ 2 ಗ್ರಾಮಗಳು ಇನ್ನೂರು ಜಾನುವಾರುಗಳು ನೆರೆ ಹಾವಳಿಯಿಂದ ಕೊಚ್ಚಿಹೋದವು.

ಚರ್ಚಿಲ್ಲರು ಅತ್ತರು

ಭಾರತ ಸೈನ್ಯ ಕೈಬಿಟ್ಟಿದ್ದರಿಂದ ಪೂರ್ವದಲ್ಲಿ ಬ್ರಿಟಿಷ್ ಪರಿಸ್ಥಿತಿ ಶಕ್ತಿಹೀನವಾಯಿತೆಂದು ಚರ್ಚಿಲ್ಲರು ಪರ್ಷಿಯ ಎಂಬ ಸಮಸ್ಯೆ ಕುರಿತು ಕಾಮನ್ಸಿನಲ್ಲಿ ತಿಳಿಸಿದ್ದಾರೆ.

ಸಾಮೂಹಿಕ ಚಳುವಳಿ

ವರ್ಣ ನಿರೋಧ್ಧ ಶಾಸನ ವಿರೋಧಿಸಲು ಸಾಮೂಹಿಕ ಚಳವಳಿ ಮಾಡಲು ದಕ್ಷಿಣ ಆಫ್ರಿಕದ ಭಾರತೀಯರು, ಆಫ್ರಿಕನರು ಮತ್ತು ಮಿಶ್ರಿತ ವರ್ಣದವರು ನಿರ್ಧರಿಸಿರುವದಾಗಿ ಜೊಹಾನ್ಸ್‌ಬರ್ಗ್ ವಾರ್ತೆ.

× ತನ್ನ ರಾಜೀನಾಮೆಯನ್ನು ಕಿದ್ವಾಯಿ ನೆಹ್ರುರಲ್ಲಿ ಓತ್ತಾಯಿಸಿದ್ದಾರೆ.

ಪಾಕಿಸ್ತಾನ ಹದಿನೈದು ಮೈಲಿ ಅಕ್ರಮಿಸಿದೆ !

ಭಾರತದ ಕಾಶ್ಮೀರದ ಪ್ರದೇಶದಲ್ಲಿ 15 ಮೈಲಿಗಳಷ್ಟು ಪಾಕಿಸ್ತಾನ ಅಕ್ರಮಿಸಿದೆ ಎಂದು ಪಂ|| ನೆಹರು ತಿಳಿಸಿದ್ದಾರೆ ಪಾಕ್‌ನ ಲಿಯಾಕತ್ ಅಲಿ ಇದನ್ನು ನಿರಾಕರಿಸಿಲ್ಲ ಎಂದು ರೇಡಿಯೊ ಟೀಕೆಗಾರ ಡಾರ್ವಿ ವಾರ್ತೆ ಹೇಳಿಕೆ.

ಭೂಮಾತೆ, ಗೋಮಾತೆ, ಗಂಗಾಮಾತೆ

(ಮುಂದುವರಿದುದು)

11 ನೆಯ ಶತಾಬ್ದದಲ್ಲಿ ಸೋಮನಾಥ ದೇವಾಲಯವನ್ನು ಸುಲ್ತಾನ್ ಮಹಮದ್‌ನು ಧ್ವಂಸ ಮಾಡಿದ್ದು ಎಲ್ಲರೂ ತಿಳಿದಿರುವ ವಿಷಯವೇ ; ಆ ಪ್ರಸಿದ್ಧ ದೇವಾಲಯವನ್ನು ವರ್ಣಿಸುತ್ತಾ "ಅಲ್ಬೆರೂನಿ" ಅಲ್ಲಿ ನಡೆಯುವ ಪೂಜಾ ಪುನಸ್ಕಾರಗಳ ವಿಶಿಷ್ಟತೆಯನ್ನು ಪ್ರಶಂಸಿಸಿ, ಆ ದೇವಸ್ಥಾನಕ್ಕೆ ಪ್ರಾಪ್ತವಾದ ವಿಪತ್ತಿಗಾಗಿ ವ್ಯಸನವನ್ನು ಪ್ರದರ್ಶಿಸಿರುವನು. ಸಾವಿರ ಮಂದಿ ಬ್ರಾಹ್ಮಣರು ದಿದಂ ಪ್ರತಿ ಪೂಜೆಯನ್ನು ಮಾಡುತ್ತಿದ್ದರು. ಪ್ರತಿ ರಾತ್ರಿ ದೇವಾಲಯದಲ್ಲಿ ಆಗಲೇ ತರಿಸಿದ್ದ ಗಂಗಾಜಲದಿಂದ ಅಭಿಷೇಕವಾಗುತ್ತಿತ್ತು. ಗಂಗಾ ನದಿಯು ಸೋಮನಾಥಕ್ಕೆ 600 ಮೈಲುಗಳಿಗಿಂತ ಹೆಚ್ಚು ದೂರದಲ್ಲಿದ್ದರೂ ಆ ನೀರನ್ನೇ ಅಭಿಷೇಕಕ್ಕೆ ಉಪಯೋಗಿಸುತ್ತಿದ್ದುದರಿಂದ ಗಂಗೆಯ ಮಹತ್ವವೆಷ್ಟೆಂಬುದನ್ನರಿಯಬಹುದು ಎಂದು "ಅಲ್ಬೆರೂನೀ" ಬರೆದಿದ್ದಾನೆ.

1693 ರಲ್ಲಿ ಬರೆಯಲ್ಪಟ್ಟ 'ಖುಲಾಸತ್ತವಾರ್ದಿ' ಎಂಬ ಪರ್ಷಿಯನ್ ಗ್ರಂಥದಲ್ಲಿ ಗಂಗೆಯನ್ನು ಕುರಿತು ಹೀಗೆ ತಿಳಿಸಿರುತ್ತದೆ —

೧ ಗಂಗೆಯನ್ನು ಮಡಿಕೆಯಲ್ಲಿ ತುಂಬಿ ವರ್ಷದವರೆಗೂ ಇಟ್ಟಿದ್ದರೂ ವಾಸನೆಯು ಬರುವುದಿಲ್ಲ.

೨ ಸಾಧುಸಂತರ ಹೃದಯದಂತೆ ಗಂಗೆಯು ನಿಷ್ಕಲ್ಮಷವಾದದ್ದು ; ಋಷಿಪುಂಗವರ ಪವಿತ್ರಾತ್ಮಗಳಂತೆ ತೇಜೋವಂತವಾದದ್ದು.

೩ ಗಂಗೆಯಲ್ಲಿ ಇಷ್ಟು ಪರಿಶುದ್ಧತೆ ಇರುವುದರಿಂದ ಅದು ಎಲ್ಲಾ ಕಷ್ಟಗಳಿಗೂ ಅನುಕೂಲವಾಗಿರುತ್ತದೆ.

೪ ಗಂಗೆಯು ಆರೋಗ್ಯವನ್ನು ಕೊಡುತ್ತದೆ ; ಬಲಹೀನರಿಗೆ ಬಲವನ್ನು ಕೊಡುತ್ತದೆ ; ದೀರ್ಘ ವ್ಯಾಧಿಗಳನ್ನು ಹರಣಮಾಡುತ್ತದೆ.

೫ ಆರೋಗ್ಯವಂತರಿಗೆ ಹುಷ್ಟುಪುಷ್ಟತೆಯನ್ನೂ ಉತ್ಸಾಹವನ್ನೂ ಉಂಟು ಮಾಡುತ್ತದೆ.

೬ ಹಸಿವೆಯನ್ನುಂಟುಮಾಡುತ್ತದೆ ; ಕಾಮೋದ್ರೇಕವನ್ನುಂಟು ಮಾಡುತ್ತದೆ

೭ ನಿಶ್ಯಕ್ತರಿಗೆ ರಕ್ತವೃದ್ಧಿಯನ್ನು ಉಂಟುಮಾಡುತ್ತದೆ

೮ ಅನಾರೋಗ್ಯವುಳ್ಳವರಿಗೆ ಮುಖವಿಕಾಸವನ್ನು ಹೆಚ್ಚಿಸುತ್ತದೆ.

೯ ಈ ಕಾರಣದಿಂದಲೇ ಭಾರತದೇಶದ ರಾಜರು ಸದಾ ಗಂಗಾ ಜಲವನ್ನು ಕುಡಿಯುತ್ತಿದ್ದರು

ಶೇಷ

SHAKTI SUDHA

A Superb Tonic

For Quality Printing
L. N. Press ಶಕ್ತಿಸುಧಾ

Sreerampet, Mysore — ಉತ್ತಮವಾದ ಟಾನಿಕ್ —

Edited, Printed and Published by M. S. Krishna Rao, at the Satyavadi Press, Chamarajpuram Mysore

ಉಡ್‌ಲ್ಯಾಂಡ್ಸ್

— 4 ನೇ ವಾರ —

ದುಲ್‌ಖುಷ್ ಪಂಜೋಲಿಯವರ

ನಗೀನಾ

— ಪಾತ್ರ —

ನೂರ್ಜ, ನಾಸಿರ್ ಖಾನ್, ಗೋಪ್

ನಗೀನಾ ಚಿತ್ರದೊಂದಿಗೆ

ಹಜ್ ಅಥವ ಮೆಕ್ಕಾಯಾತ್ರೆ

ಚಿತ್ರವು ಪ್ರದರ್ಶಿಸಲಾಗುತ್ತಿದೆ

ರಣಜಿತ್

ಅಮೋಘ 4 ನೇ ವಾರ

ದೀದಾರ್

3—8—51 ರಿಂದ

ಸುಲೋಚನ ಚಟರ್ಜಿ, ಪ್ರೇಮ್ ಅದಿಬ್

ಕಕ್ಕೂ ನಟಿಸಿರುವ

ಪ್ರೀತ್ ಕ ಗೀತ್

= OPERA =

July 31 st

Elizebeth Ladymead

(Technicolor)

Starring — Anna Neagle

— Next —

Pygmy Island

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ಸತ್ಯವಾದಿ ಸೋಮವಾರ ಸಂಚಿಕೆ

ವಾರ್ಷಿಕ ಚಂದಾ

ಅಂಚೆವೆಚ್ಚ ಸಮೇತ 1—14—0

— ಕಳಿಗಿನ ಚಿತ್ರ —

ಕಮ್ಯೂನಿಸ್ಟ್ ಆಕ್ರಮಣಕ್ಕೆ ತುತ್ತಾದವರಿಗೆ ಸ್ಮಶಾನದಲ್ಲಿ ಸ್ಥಳವೆಂದುತೋರಿಸುವ ವ್ಯಂಗಚಿತ್ರ ಅಮೇರಿಕಾದ ಮಿನಿಯಾಪಲಿಸ್ ಟ್ರಿಬ್ಯೂನಿನಲ್ಲಿ ಪ್ರಕಟವಾಗಿತ್ತು.